**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ,**

**ಇವರ ನ್ಯಾಯಾಲಯದಲ್ಲಿ.**

<u>**ಸತ್ರ ಮೊಕದ್ದಮೆ ಸಂಖ್ಯೆ:20/2022**</u>

| | | | |
|---|---|---|---|
| ಹೆಸರು | : | ಕೆ. ಹೊಸಕೇರಪ್ಪ | ಫ್ರಾಸಾ-14 |
| ತಂದೆಯ ಹೆಸರು | : | ಕೆ.ಬಸಪ್ಪ | ಚಾಸಾ-45 |
| ವಯಸ್ಸು | : | 52 ವರ್ಷ | |
| ಉದ್ಯೋಗ | : | ಪಿಐ | |
| ವಾಸಸ್ಥಳ | : | ಹಟ್ಟಿ ಪೊಲೀಸ ಠಾಣೆ, ಜಿಃ ರಾಯಚೂರ | |

ದಿನಾಂಕಃ 26-07-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

<u>**ಸರಕಾರಿ ಅಭಿಯೋಜಕರು ಗೈರು ಹಾಜರಿದ್ದು, ಸಾಕ್ಷಿಯು ಸ್ವತಃ ಸಾಕ್ಷಿ ನುಡಿಯಲು ಅನುಮತಿ ಕೇಳಿದ್ದರಿಂದ ನೀಡಲಾಯಿತು.**</u>

<u>**ಮುಖ್ಯ ವಿಚಾರಣೆಃ ಸ್ವತಃ**</u>

ದಿನಾಂಕಃ 04.06.2021 ರಿಂದ 22-07-2022 ರವರೆಗೆ ಸಿಪಿಐ ಹುನಗುಂದ ಎಂದು ಕರ್ತವ್ಯ ನಿವರ್ಹಿಸಿದ್ದೇನೆ.

ದಿನಾಂಕಃ 01.11.2021 ರಂದು ಮೃತ ಶಾಂತಪ್ಪನ ಹೆಂಡತಿ ಆರೋಪಿ ಹುಲಿಗೆವ್ವ ತನ್ನ ಗಂಡ ಕಾಣೆಯಾಗಿದ್ದಾನೆಂದು ಪಿರ್ಯಾದಿ ನೀಡಿದ್ದು, ನಮ್ಮ ಠಾಣಾ ನಂ.28/2021 ರಲ್ಲಿ ಪ್ರಕರಣ ದಾಖಲಿಸಿಕೊಂಡೆ. ದಿನಾಂಕಃ 17.11.2021 ರಂದು ಚಾಸಾ-44 ರವರಿಂದ ಕಡತವನ್ನು ಪಡೆದುಕೊಂಡು ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಗುನ್ನಾ ಸ್ಥಳದ ಪಂಚನಾಮೆಯನ್ನು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿದ್ದೇನೆ ಹಾಗೂ ಕಚ್ಚಾ ನಕಾಶೆ ತೆಗೆದಿದ್ದೇನೆ. ಎರಡು ಭಾವ ಚಿತ್ರಗಳನ್ನು ತೆಗೆದಿರುತ್ತೇನೆ. ಆರೋಪಿ ಪತ್ತೆಗಾಗಿ ಚಾಸಾ-44 ರವರಿಗೆ ಮೆಮೊ ನೀಡಿರುತ್ತೇನೆ. ದಿಃ 18.11.2021 ರಂದು ಚಾಸಾ-44 ರವರು ತನ್ನ ಸಿಬ್ಬಂದಿಯೊಂದಿಗೆ ಆರೋಪಿ-1 ಮತ್ತು 2 ರವರನ್ನು ನನ್ನ ಮುಂದೆ 8-30 ಗಂಟೆಗೆ ಇಲಕಲ್ಲ ಗ್ರಾಮೀಣ ಠಾಣೆಯಲ್ಲಿ ಹಾಜರು ಪಡಿಸಿದ್ದು, ವಿಚಾರಿಸಿ ಸ್ವ-ಖುಷಿ ಹೇಳಿಕೆ ಪಡೆದುಕೊಂಡು ನಿಯಮಗಳಾನುಸಾರ ದಸ್ತಗೀರಿ ಕ್ರಮ ಅನುಸರಿಸಿದ್ದೇನೆ. ಚಾಸಾ-

38 ರವರಿಂದ 65 ಬಿ ಪ್ರಮಾಣ ಪತ್ರ ಪಡೆದಿದ್ದೇನೆ. ಚಾಸಾ-28 ರವರಿಂದ ಪ್ರ.ವ. ವರದಿ ನೀಡಿದ ಬಗ್ಗೆ ವರದಿ ಪಡೆದ್ದೇನೆ. ಇನ್ನುಳಿದ ಆರೋಪಿ-3 ರಿಂದ 5 ರವರನ್ನು ಪತ್ತೆ ಮಾಡಲು ಚಾಸಾ-44 ರವರಿಗೆ ವಹಿಸಿದೆ. ಚಾಸಾ-44 ಇವರು ರಾತ್ರಿ 11.15 ಗಂಟೆಗೆ ನನ್ನ ಮುಂದೆ ಹಾಜರು ಪಡಿಸಿದ್ದಾರೆ. ಆರೋಪಿ-3 ರಿಂದ 5 ರವರ ಸ್ವ-ಖುಷಿ ಹೇಳಿಕೆ ಪಡೆದುಕೊಂಡು ದಸ್ತಗಿರಿ ನಿಯಮ ಪಾಲಿಸಿದ್ದೇನೆ. ಮೃತದೇಹ ಪತ್ತೆಗಾಗಿ ಚಾಸಾ-44 ಇವರನ್ನು ನೇಮಿಸಿದ್ದೇನೆ. ದಿಃ22.10.2021 ರಿಂದ ದಿಃ 23.10.2021 ರವರೆಗೆ ಆಲಮಟ್ಟಿ ಟೋಲನಾಕದಲ್ಲಿ ಹೋದ ವಾಹನಗಳ ಮಾಹಿತಿ ಕುರಿತು ಮನವಿ ನೀಡಿದ್ದೇನೆ ಹಾಗೂ ಮೃತ ದೇಹ ಪತ್ತೆ ಆದಲ್ಲಿ ಮಾಹಿತಿ ನೀಡಲು ಎಲ್ಲಾ ಠಾಣೆಗೆ ಇ-ಮೇಲ್ ಕಳುಹಿಸಿದ್ದೇನೆ. ದಿಃ 19.11.2021 ರಂದು ಆರೋಪಿ-1 ಮತ್ತು 3 ರಿಂದ 5 ರವರು ತೋರಿಸಿದ ಕೃತ್ಯಕ್ಕೆ ಬಳಸಿದ ಸಿಮ್ ಕಾರ್ಡ ಒಗೆದ ಸ್ಥಳದ ಪಂಚನಾಮೆಯನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 7-00 ರಿಂದ 7-45 ರವರೆಗೆ ಜರುಗಿಸಿ, ಸ್ಥಳದಲ್ಲಿ ಎರಡು ಪೋಟೋಗಳನ್ನು ತೆಗೆದಿದ್ದೇನೆ ಹಾಗೂ ಆರೋಪಿ-1, 3 ರಿಂದ 5 ರವರು ಕೃತ್ಯಕ್ಕೆ ಬಳಸಿದ ಕೊಡಲಿಯನ್ನು ತೋರಿಸಿದ್ದು, ಬೆಳಿಗ್ಗ 8-00 ರಿಂದ 8-45 ಗಂಟೆಗೆ ಪಂಚನಾಮೆ ಮಾಡಿ, ಸ್ಥಳದಲ್ಲಿ ಪೋಟೋ ತೆಗೆದಿದ್ದೇನೆ. ಆರೋಪಿ-1, 3 ರಿಂದ 5 ರವರು ಕೃತ್ಯಕ್ಕೆ ಸಂಬಂಧಿಸಿದ ಮಾರುತು ಸುಜುಕಿ ವಾಹನ ಹಾಗೂ ವಾಹನದಲ್ಲಿದ್ದ ಸ್ಪಿಕರಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಬೆಳಿಗ್ಗ 9-00 ರಿಂದ 9-45 ಗಂಟೆವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಜಪ್ತಿ ಮಾಡಿಕೊಂಡು ಸ್ಥಳದಲ್ಲಿ 4 ಪೋಟೋಗಳನ್ನು ತೆಗೆದಿದ್ದೆನೆ. 5 ನೇ ಆರೋಪಿ ತೋರಿಸಿ ಹಾಜರು ಪಡಿಸಿದ ಬಟ್ಟೆಗಳನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 10-00 ರಿಂದ 10-45 ಗಂಟೆವರೆಗೆ ಪಂಚನಾಮೆ ಮಾಡಿ, ಎರಡು ಪೋಟೋ ತೆಗೆದಿದ್ದೇನೆ. 1 ನೇ ಆರೋಪಿ ತೋರಿಸಿದ ಕೃತ್ಯಕ್ಕೆ ಬಳಸಿದ ಜಾಕೇಟನ್ನು ಬೆಳಿಗ್ಗ 11-00 ರಿಂದ 11-45 ಗಂಟೆಗೆ ವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಜಪ್ತಿ ಮಾಡಿಕೊಂಡಿದ್ದೇನೆ. 3 ನೇ ಆರೋಪಿ ಕರೆದುಕೊಂಡು ಹೋಗಿ ತೋರಿಸಿದ ಕೃತ್ಯಕ ಸಂಬಂಧಿಸಿದ ಜನ್ಸ ಪ್ಯಾಂಟ 12.00 ರಿಂದ 12.45 ರವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಜಪ್ತ ಮಾಡಿ ಎರಡು ಪೋಟೋ ತೆಗೆದಿದ್ದೇನೆ. ಆರೋಪಿ-1 ರಿಂದ 5 ರವರು ಕೊಲೆ ಮಾಡಿದ ಸ್ಥಳ ತೋರಿಸಿದ್ದು ಮಧ್ಯಾಹ್ನ 1-00 ರಿಂದ 1.45 ಗಂಟೆವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆ ಮಾಡಿ ಎರಡು ಪೋಟೋ ತೆಗೆದಿದ್ದೇನೆ. ಆರೋಪಿ-1, 3 ರಿಂದ 5 ರವರು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳದ ಪಂಚನಾಮೆಯನ್ನು 4.30 ರಿಂದ 5.00 ಗಂಟೆವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಮಾಡಿದ್ದೇನೆ ಹಾಗೂ ಸ್ಥಳದಲ್ಲಿ ಎರಡು ಪೋಟೋ ತೆಗೆದಿದ್ದೇನೆ. 4 ಆರೋಪಿ ತೋರಿಸಿ ಹಾಜರು ಪಡಿಸಿದ ಒಂದು ಶರ್ಟ ಮತ್ತು ಜಿನ್ಸ ಪ್ಯಾಂಟ 5-30 ರಿಂದ 6-00 ಗಂಟೆವರೆಗೆ ಪಂಚನಾಮೆ ಜರುಗಿಸಿದ್ದೇನೆ, ಎರಡು ಭಾವಚಿತ್ರಗಳನ್ನು ತೆಗೆದಿದ್ದೇನೆ.

ಆರೋಪಿ-1 ರಿಂದ 5 ರವರನ್ನು ನಿಯಮಗಳ ಅಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದೇನೆ.

ಚಾಸಾ-1 ರವರ ಪುರವಣಿ ಹೇಳಿಕೆ ಪಡೆದಿದ್ದೇನೆ. ಚಾಸಾ-10 ಮತ್ತು 11 ರವರ ಹೇಳಿಕೆ ಪಡೆದಿದ್ದೇನೆ. ಚಾಸಾ-38 ರವರಿಂದ 65 ಬಿ ಪ್ರಮಾಣ ಪತ್ರ ಪಡೆದಿದ್ದೇನೆ ಹಾಗೂ ಆಲಮಟ್ಟಿ ಟೋಲನಾಕದವರು ಪೂರೈಸಿದ ವಾಹನದ ವಿವರ ಪಡೆದಿದ್ದೇನೆ. ಆರೋಪಿ-1 ಇವರ ಮೊಬೈಲ ಜಿಯೋ ಹಾಗೂ ಐಡಿಯಾ ಕಂಪನಿಯಿಂದ ಸಿಡಿಆರ್, ಎಸ್.ಡಿ.ಆರ್, ಕ್ಯಾಪ್ ಪಡೆದಿದ್ದೇನೆ. ಆರೋಪಿ-2 ಇವರ ಮೊಬೈಲ ಏರಿಟೆಲ್ ಕಂಪನಿಯಿಂದ ಸಿಡಿಆರ್, ಎಸ್.ಡಿ.ಆರ್, ಕ್ಯಾಪ್ ಪಡೆದಿದ್ದೇನೆ. ಆರೋಪಿ-3 ಮತ್ತು 4 ಇವರ ಮೊಬೈಲ ಜಿಯೋ ಕಂಪನಿಯಿಂದ ಸಿಡಿಆರ್, ಎಸ್.ಡಿ.ಆರ್, ಕ್ಯಾಪ್ ಪಡೆದಿದ್ದೇನೆ. ಮೃತ ಶಾಂತಪ್ಪ ಇವರ ಮೊಬೈಲ ಜಿಯೋ ಕಂಪನಿಯಿಂದ ಸಿಡಿಆರ್, ಎಸ್.ಡಿ.ಆರ್, ಕ್ಯಾಪ್ ಪಡೆದಿದ್ದೇನೆ. ಚಾಸಾ-43 ರವರಿಂದ ಹೇಳಿಕೆ ಪಡೆದಿದ್ದೇನೆ. ದಿಃ 20.11.2021 ರಂದು ಚಾಸಾ-12 ರಿಂದ 22 ರವರೆಗೆ ಹೇಳಿಕೆ ಪಡೆದಿದ್ದೇನೆ. ಚಾಸಾ-38 ರವರಿಂದ 65 ಬಿ ಪ್ರಮಾಣ ಪತ್ರ ಪಡೆದಿದ್ದೇನೆ. ನಕಾಶೆ ತೆಗೆಯಲು ಪಿ.ಡಬ್ಲ್ಯೂ.ಡಿ ಮನವಿ ನೀಡಿದ್ದೇನೆ. ಉತಾರೆ ನೀಡಲು ಪಿ.ಡಿ.ಓ ಗೆ ಮನವಿ ನೀಡಿದ್ದೇನೆ. ದಿಃ 19.11.2021 ರಂದು ಜಪ್ತಿ ಮಾಡಿದ ವಸ್ತುಗಳನ್ನು ಪಿ.ಎಫ್. ಅಳವಡಿಸಿ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ಶವಪತ್ತೆಗಾಗಿ ಸಿಬ್ಬಂದಿಯನ್ನು ನೇಮಿಸಿದ್ದೇನೆ. ದಿಃ 21.11.2021 ರಂದು ಚಾಸಾ-23 ರಿಂದ 27 ರವರ ಹೇಳಿಕೆ ಪಡೆದುಕೊಂಡಿದ್ದೇನೆ. ಸಿಬ್ಬಂದಿ ಶವ ಸಿಕ್ಕಿಲ್ಲ ಎಂದು ವರದಿ ನೀಡಿದ್ದಾರೆ. ದಿಃ 23.11.2021 ರಂದು ಸಿಬ್ಬಂದಿ ಸಾಕಷ್ಟು ಊರಗಳಲ್ಲಿ, ಕೃಷ್ಣಾ ನದಿಯಲ್ಲಿ ಹುಡುಕಾಡಿ ಶವ ಸಿಕ್ಕಿಲ್ಲ ಎಂದು ವರದಿ ನೀಡಿದ್ದಾರೆ. ದಿಃ 24.11.2021 ರಂದು ಚಾಸಾ-10 ಹೇಳಿಕೆ ಪಡೆಯಲು ನ್ಯಾಯಾಧೀಶರಿಗೆ ಮನವಿ ನೀಡಿದ್ದೇನೆ. ದಿಃ29.11.2021 ರಂದು ಜಪ್ತಿ ಮಾಡಿದ ವಸ್ತುಗಳನ್ನು ಆರ್.ಎಫ್.ಎಸ್.ಎಲ್. ಕಳುಹಿಸಿದ್ದೇನೆ. ದಿಃ 30.11.2021 ರಂದು ಚಾಸಾ-30 ಎಫ್.ಎಸ್.ಎಲ್. ನಿಂದ ವಸ್ತುಗಳನ್ನು ತಂದು ಹಾಜರು ಪಡಿಸಿದ ಮೇರೆಗೆ ವಿಚಾರಿಸಿ ವರದಿ ಪಡೆದುಕೊಂಡಿದ್ದೇನೆ. ದಿಃ 02.12.2021 ರಂದು ಚಾಸಾ-10 ರವರ 164 ಹೇಳಿಕೆ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಾಕ್ಷಿ ಸಮಯ ಕೇಳಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

26.07.2024

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.